# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** 2018-19ನೇ ಸಾಲಿನಲ್ಲಿ ರಾಜ್ಯವಲಯ ಯೋಜನೆಯಡಿ **ಜೈನ್ ಅಭಿವೃದ್ಧಿ ಯೋಜನೆಯಡಿ "ಬಿದಾಯಿ"** ಕಾರ್ಯಕ್ರಮಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲುಡಿ 257 ಎಂಡಿಎಸ್ 2018, ಬೆಂಗಳೂರು ದಿ: 06.04.2018.

2. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 257 ಎಂಡಿಎಸ್ 2018 ಬೆಂಗಳೂರು ದಿ: 11.01.2019.

>>><<<

**ಪ್ರಸ್ತಾವನೆ:-**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳನ್ನು 2018-19ನೇ ಆರ್ಥಿಕ ಸಾಲಿನಲ್ಲಿ ಮುಂದುವರೆಸಿ ಉಲ್ಲೇಖ (1)ರಲ್ಲಿ ಆದೇಶ ಹೊರಡಿಸಲಾಗಿದೆ. ಅದರಲ್ಲಿ **ಜೈನ್ ಅಭಿವೃದ್ಧಿ ಯೋಜನೆ**ಯನ್ನು ಸಹ ಮುಂದುವರೆಸಲಾಗಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳಿಗೆ 2018-19ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ನಾಲ್ಕನೇ ತ್ರೈಮಾಸಿಕ ಕಂತನ್ನು ಉಲ್ಲೇಖ(2)ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

ದಿ:09-01-2019 ಕ್ಕೆ ಬಾಕಿ ಉಳಿದಿರುವ ಹಾಗೂ 2018-19 ನೇ ಸಾಲಿನಲ್ಲಿ ಬಿದಾಯಿ ಕಾರ್ಯಕ್ರಮದಡಿ ಸ್ವೀಕೃತವಾಗಿರುವ ಅರ್ಹ ಜೈನ್ ಫಲಾನುಭವಿಗಳ ಅನುದಾನವನ್ನು ಬಿಡುಗಡೆ ಮಾಡಬೇಕಾಗಿದೆ.

**ಜೈನ್ ಅಭಿವೃದ್ಧಿ ಯೋಜನೆ**ಯಡಿ ನಾಲ್ಕನೇ ಕಂತಿನ ಅನುದಾನ ರೂ.500.00 ಲಕ್ಷಗಳನ್ನು ಬಿಡುಗಡೆ ಮಾಡಿ ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ಇವರ ವಶಕ್ಕೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನದ ಪೈಕಿ **ಜೈನ್** ಫಲಾನುಭವಿಗಳಿಗೆ ಬಿದಾಯಿ ಯೋಜನೇಯಡಿ ಜಿಲ್ಲಾವಾರು ಸ್ವೀಕೃತವಾಗಿರುವ ಅರ್ಜಿಗಳಿಗೆ ನಿಯಮಾನುಸಾರ ಅನುದಾನ ಮಂಜೂರು ಮಾಡಲು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-01 ರ ಪ್ರಕಾರ ಸಂಬಂಧಪಟ್ಟ ಜಿಲ್ಲೆಗಳಿಗೆ ಎರಡನೇ ಕಂತಿನ ಅನುದಾನ ಒಟ್ಟು ರೂ130.00ಲಕ್ಷ (ರೂ. ಒಂದು ಕೋಟಿ ಮೂವತ್ತು ಲಕ್ಷಗಳು ರೂ ಮಾತ್ರ) ಗಳನ್ನು ಸಂಬಂಧಪಟ್ಟ ಆಯಾ ಜಿಲ್ಲೆಯ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,** ರವರಿಗೆ ಮರು ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ.

## ಆ ದೇ ಶ

**ಸಂಖ್ಯೆ: ಅಸಂನಿ/ಬಿದಾಯಿ/ಆ/ಸಿಆರ್-103/2018-19** **ದಿನಾಂಕ:** 11.01.2019

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ **ಜೈನ್** ಫಲಾನುಭವಿಗಳಿಗೆ ಬಿದಾಯಿ ಯೋಜನೇಯಡಿ ಜಿಲ್ಲಾವಾರು ಸ್ವೀಕೃತವಾಗಿರುವ ಅರ್ಜಿಗಳಿಗೆ ನಿಯಮಾನುಸಾರ ಅನುದಾನ ಮಂಜೂರು ಮಾಡಲು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-01 ರ ಪ್ರಕಾರ ಸಂಬಂಧಪಟ್ಟ ಜಿಲ್ಲೆಗಳಿಗೆ ಎರಡನೇ ಕಂತಿನ ಅನುದಾನ ಒಟ್ಟು ರೂ130.00ಲಕ್ಷ (ರೂ. ಒಂದು ಕೋಟಿ ಮೂವತ್ತು ಲಕ್ಷಗಳು ರೂ ಮಾತ್ರ) ಗಳನ್ನು ಸಂಬಂಧಪಟ್ಟ ಆಯಾ ಜಿಲ್ಲೆಯ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,** ರವರಿಗೆ ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

Cont...2

**ನಿಬಂಧನೆಗಳು:-**

1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 533 ಎಂಡಿಎಸ್ 2013 ದಿನಾಂಕ: 13.11.2013ರಂತೆ ನೀಡಲಾಗಿರುವ ಸೂಚನೆಗಳನ್ನು ಸದರಿ ಯೋಜನೆಗೆ ಅನುಷ್ಠಾನಗೊಳಿಸತಕ್ಕದ್ದು/ ವೆಚ್ಚಮಾಡುವುದು.
2. ದಿನಾಂಕ: 01.04.2016 ರಿಂದ ಸ್ವೀಕೃತವಾಗಿರುವ ಅರ್ಜಿಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲುಡಿ 123 ಎಂಡಿಎಸ್ 2016, ದಿ: 31.03.2016 ರಂತೆ ಜೇಷ್ಠತೆ ಪಟ್ಟಿಯನ್ನು ತಯಾರಿಸಿ ಅರ್ಹ ಅರ್ಜಿಗಳಿಗೆ ಅನುದಾನ ಮಂಜೂರು ಮಾಡುವುದು.
3. ಸ್ವೀಕೃತ ಅರ್ಜಿಗಳನ್ನು ಅಗಿಂದಾಗೆ ಹೊರಡಿಸಲಾಗಿರುವ ಆದೇಶ, ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳ/ಷರತ್ತುಗಳಂತೆ ಕೂಲಂಕುಶವಾಗಿ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಅನುದಾನ ನೀಡತಕ್ಕದ್ದು ಯಾವುದೇ ತಪ್ಪಾಗಿದ್ದಲ್ಲಿ ಮುಂದೆ ಆಗು ಹೋಗುಗಳಿಗೆ ನೇರವಾಗಿ ನಿಮ್ಮನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.
4. ಬಿಡುಗಡೆ ಮಾಡಿರುವ ಮೊತ್ತಕ್ಕೆ ಸಂಬಂಧಿಸಿದ ವೆಚ್ಚದ ವಿವರ 62-ಬಿ ಖಜಾನೆಯಿಂದ ಪಡೆದು ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

ಪ್ರಸ್ತುತ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕಶೀರ್ಷಿಕೆ 2225-03-277-2-82 ಆಬ್ಜೆಕ್ಟ್ ಕೋಡ್ 117 ಜೈನ್, ಬೌದ್ಧ ಮತ್ತು ಸಿಖ್ ಸಮುದಾಯದ ಅಭಿವೃದ್ಧಿ ರಾಜ್ಯವಲಯ ಯೋಜನೆರಡಿ 2018-19 ಭರಿಸುವುದು.

11/1/19

**(ಅಕ್ರಂ ಪಾಷ)**
**ನಿರ್ದೇಶಕರು,**
**ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ,**
**ಬೆಂಗಳೂರು.**

**ಪ್ರತಿಯನ್ನು:-**

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
5. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
6. ಸಂಬಂಧಪಟ್ಟ ಉಪ-ನಿದೇರ್ಶಕರು/ಜಿಲ್ಲಾ ಖಜಾನಾಧಿಕಾರಿಗಳು
7. ಲೆಕ್ಕ ಪತ್ರ ಶಾಖೆ
8. ಕಛೇರಿ ಪ್ರತಿ
9. ಹೆಚ್ಚುವರಿ ಪ್ರತಿ.

**ಅಲ್ಪಸಂಖ್ಯಾತರ ನಿರ್ದೇಶನಾಲಯ**

**2018-19ನೇ ಸಾಲಿನಲ್ಲಿ ಬಿದಾಯಿ ಯೋಜನೆಯಡಿ ಜೈನ್ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ**

**ಆದೇಶ ಸಂಖ್ಯೆ: ಅಸಂನಿ:ಆ:ಬಿದಾಯಿ:ಸಿಆರ್-103:2018-19 ದಿ: 11.01.2019**

(ರೂ ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ಭೌತಿಕ | ಬಿಡುಗಡೆಯಾದ ಅನುದಾನ |
|---|---|---|---|
| 1 | ಬಾಗಲಕೋಟೆ | 6 | 3.00 |
| 2 | ಬೆಳಗಾಂ | 114 | 57.00 |
| 3 | ಚಾಮರಾಜನಗರ | 1 | 0.50 |
| 4 | ಚಿಕ್ಕಮಗಳೂರು | 2 | 1.00 |
| 5 | ಚಿತ್ರದುರ್ಗ | 1 | 0.50 |
| 6 | ದಕ್ಷಿಣ ಕನ್ನಡ | 6 | 3.00 |
| 7 | ದಾವಣಗೆರೆ | 4 | 2.00 |
| 8 | ಧಾರವಾಡ | 38 | 19.00 |
| 9 | ಗದಗ | 9 | 4.50 |
| 10 | ಕಲಬುರಗಿ | 7 | 3.50 |
| 11 | ಹಾಸನ | 4 | 2.00 |
| 12 | ಹಾವೇರಿ | 44 | 22.00 |
| 13 | ಕೊಪ್ಪಳ | 2 | 1.00 |
| 14 | ಮೈಸೂರು | 4 | 2.00 |
| 15 | ತುಮಕೂರು | 3 | 1.50 |
| 16 | ಉತ್ತರ ಕನ್ನಡ | 3 | 1.50 |
| 17 | ಉಡುಪಿ | 3 | 1.50 |
| 18 | ವಿಜಯಾಪುರ | 9 | 4.50 |
| | ಒಟ್ಟು | 260 | 130.00 |

(ರೂ ಒಂದು ಕೋಟಿ ಮೂವತ್ತು ಲಕ್ಷಗಳು ಮಾತ್ರ)

ನಿರ್ದೇಶಕರು
ಅಲ್ಪ ಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು.